ತಾರೀಖು 30ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮಳವಳ್ಳಿ ಸಬ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸುಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವೆಜನ್ನು ಹಾಜರ್ಮಾಡಿದವನೆ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಸಬ ರಿಜಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕ್ಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷ್ನ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
213 / 81—82	ಪೂರಿಗಾಲಿ ಕಸಬೇಲಿರುವ ವೆಂಕಟರಮಣಾಚಾರಿ ಮಗ ತಿಮಪ್ಪ, ಕೃಷ್ಣಪ್ಪಬ್ರಾಹ್ಮಣ	ಪೂರಿಗಾಲಿ ಹೋಬಳಿ ಪೈಕಿ ಮರಳಹಳ್ಳಿ ಗ್ರಾಮ ದಾಖಲೆ ಕೃಷ್ಣಯ್ಯಂಗಾರ್ ಹುಂಡೀಲಿರುವ ವೆಂಕಟನರಸಿಂಹಾಚಾರ್ ಮಗ ಕೃಷ್ಣಾಚಾರಿ	20—1—82	20—1—82	(50) ರೂಪಾಯಿನ ಮನೆ ಅಧಾರ ಪತ್ರ.

ಆಬ್ದುಲ್ಖಾದರ್, ಕೆ. ಬಿ, ರಿಜಿಸ್ಟ್ರಾರ್.

ತಾರೀಖು 1ನೇ ಫಿಬ್ರವರೀ 1884.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ರ 1884ನೇ ಇಸವಿ ಏಪ್ರೆಲ್ ಗುರ್ಯೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವಸ್ತೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮೊಹಲ್ಲಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್ಟೆಂಡೆಂಟರವರು, ಸ್ರ 1884ನೇ ಇಸವಿ ಮಾರ್ಚೀ 15ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಮೈಸೂರು ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ನಾಟೀ ನೋಟುಗಳ ಮೂಲಕ ಡಿಪಾಜಿಟ್ಟಿನೀಲೇ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಪ್ರಾತಃಕಾಲ 7 ಘಂಟೆಗೆ ಮೈಸೂರು ಜೈಲ್ ಸೂಪರ್ಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

	ರೂ.	ಆ.	ಪೈ.
ನೇಟಿವ್ ಕೂಲಿಯವರಾದ ಗಂಡಸರು A ಕ್ಲಾಸ್			
ಡಿಟೋ ಡಿಟೋ B „			
ಡಿಟೋ ಡಿಟೋ C „			
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು, ಸಾದಾ ಖೈದಿನಲ್ಲಿ ಮತ್ತು ವಿಚಾರಣೆಯಲ್ಲಿ ಇರತಕ್ಕವರು D ಕ್ಲಾಸ್			
ಡಿಟೋ ಹುಡುಗರಾದ ಖೈದೀರು			

ಯೂರೋಪಿಯರ್ಯಗಳು ವ ಈಸ್ಟ್ ಇಂಡಿಯರ್ಯಗಳು

ರಾಗಿ ಸಹಿತ ಆಸಪತ್ರೆ ಪಥ್ಯ ... ...

ಅಕ್ಕಿ ಸಹಿತ ಡಿಟೋ ... ...

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ, ಸ್ಕೇಲ್ ಪಟ್ಟೀ ಪ್ರಕಾರ ಆಸಪತ್ರೆ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂಣೆ, ಲಾಂದ್ರಗಳು, ಮೆತ್ತು ಅವುಗಳ ರಿಪೇರಿ ಮಾಡಿಸುವಣ, ಅಡಿಗೆ ಮಾಡುವ ಬಗ್ಯೆ ತಾಂಬ್ರ ಮತ್ತು ಮಣ್ಣಿನ ಪಾತ್ರೆಗಳು, ಖೈದೀರು ವೊಟ್ಟು ಧೊಡುವ ಹರಿವಾಣಗಳು, ಪಾಯಖಾನೆ ಮತ್ತು ವಣಗಿದ ಮಣ್ಣಿನ ಬಗ್ಯೆ ಗೂಡೆಗಳು, ಜೈಲ್‌ನಲ್ಲಿರತಕ್ಕ ಖೈದೀರು ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಕುಡಿಯುವ ಬಗ್ಯೆ ಮೊಗೆಗಳು, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ಶಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮುಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ಒಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ್ ಸೂಪರ್ಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟು ಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳ್ಳಿಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಪಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಜಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಮೈಸೂರು ಜೈಲ್ ಸೂಪರ್ಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳ್ಳೊಳಗೂ ಮೈಸೂರು ಜೈಲ್ ಸೂಪರ್ಟೆಂಟೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

ಕೆಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರಡ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಒಪ್ಪಿದನಾಗಿರತಕ್ಕದ್ದು.

15. ಆಹಾರ ದರದ ಪಟ್ಟಿಯನ್ನು ಇತರ ಹೆಚ್ಚಿಗೆ ಪವರ್ಲ್‌ಗಳನ್ನು ಸುದಾ ಸೂಪರ್ಟೆಂಜೆಂಟರವರನ್ನ ಕೇಳಿ ತಿಳದುಕೊಳ್ಳಬಹುದು.

ಪಿ. ಹೆಚ್. ಬೆರ್ಸ್,
ಮೈಸೂರು ಜೈಲ್ ಸೂಪರ್ಟೆಂಡೆಂಟ್.